ಒ. ಎಸ್. ನಂ.19ಃ2008

ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರ.ವ.ಬೋಧಿಸಲಾಯಿತು. ದಿಃ 24.03.2016

ಮುಂದುವರೆದ ಪಾಟೀ ಸವಾಲುಃ-

ವಾದಿ ಹಾಜರು ಪಡಿಸಿರುವ ನಿಪಿ 1 ರಿಂದ 25 ಪೊಟೋಗಳಲ್ಲಿ ವಾದಿ ಎಳೆದಿರುವ ಕೇಬಲ್ ನ ಒಂದು ಲೈನ್ ಮತ್ತು ನಾನು ಅಂದರೆ 1ನೇ ಪ್ರತಿವಾದಿ ಅನಧಿಕೃತವಾಗಿ ಒಂದು ಕೇಬಲ್ ಲೈನ್ ಎಳೆದಿರುವ ಬಗ್ಗೆ ಸದರಿ ಪೊಟೊಗಳಲ್ಲಿ ಕಾಣಿಸುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪೋಟೋಗಳನ್ನು ತೋರಿಸಿ ಅದರಲ್ಲಿ ಕೆಂಪು ಕಲರ್ ಟೇಪು ಕಾಣಿಸುತ್ತದೆ ಎಂದು ಹೇಳಿದಾಗ ಅದರಲ್ಲಿ ಕೆಂಪು ಟೇಪು ಕಾಣಿಸುತ್ತಿಲ್ಲ ಎಂದು ಸಾಕ್ಷಿ ತಿಳಿಸಿರುತ್ತಾರೆ. ಪೊಟೋದಲ್ಲಿ ಕೆಂಪು ಟೇಪು ಕಾಣಿಸುತ್ತಿದ್ದರು ನಾನು ಕಾಣಿಸುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ 25-01-2010 ರಲ್ಲಿ ಪೋಟೋಗಳನ್ನು ನ್ಯಾಯೂಲಯಕ್ಕೆ ಕೊಟ್ಟ ಬಗ್ಗೆ 1ನೇ ಪ್ರತಿವಾದಿ ಪರ ವಕೀಲರು ದಾಖಲೆಗಳನ್ನು ನೋಡಿದ ಬಗ್ಗೆ ಮೆಮೋಗೆ ಸಹಿ ಮಾಡಿರುತ್ತಾರೆಂದರೆ ಸರಿ .

ನಾನು ಅಸಲು ದಾವಾ ನಂ. 16ಃ10 ರಲ್ಲಿ ವಾದಿಗೆ 36000 ಸಾವಿರ ಸಂಪರ್ಕ ಇದೆ ಎಂದು ತಿಳಿಸಿದ್ದೇನೆಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಸಾಕ್ಷಿಗೆ ಅಸಲು ದಾವಾ ಸಂಖ್ಯೆಃ 16ಃ2010 ರಲ್ಲಿ ಈ ದಾವೆಯ 1ನೇ ಪ್ರತಿವಾದಿ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಮೆಮೋ ದ ದೃ.ಪ್ರತಿಯನ್ನು ನಿಪಿ 83 ಎಂದು ಗುರುತಿಸಲಾಯಿತು. ನಿಪಿ 82 ರಲ್ಲಿ ನಾನು ವಾದಿಯು ಮೆಂಡಿಟರಿ ನಿರ್ಬಂಧಾಕಾಜ್ಞೆ ಯನ್ನು ಹಾಕಿರುತ್ತಾರೆಂದು ಒಪ್ಪಿಕೊಂಡಿರುತ್ತೇನೆಂದರೆ ಸರಿ. ನಾನು ಈ ದಾವೆಯಲ್ಲಿ ವಾದಿ ಸಲ್ಲಿಸಿದ ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡು ತದ ನಂತರ ದಾವೆ ಹಾಕಿರುತ್ತೇನೆಂದರೆ ಸರಿ. 1ನೇ ಪ್ರತಿವಾದಿ ಮಂಜುಳಾ ಕೇಬಲ್ ವ್ಯವಹಾರವನ್ನು ಮುಡಿಗುಂಡದಲ್ಲಿ ನಡೆಸುತ್ತಿದ್ದಾರೆಂದರೆ ಸರಿ . ಅಸಲು ದಾವಾ ಸಂಖ್ಯೆ ಃ 216ಃ2005 ರಲ್ಲಿ ನಾನು ಮುಡಿಗುಂಡದಲ್ಲಿ ಕೇಬಲ್ ವ್ಯವಹಾರ ನಡೆಸುತ್ತಿರುವ ಬಗ್ಗೆ ಹೇಳಿಲ್ಲ ಎಂದರೆ ಸರಿ . ಅಸಲು ದಾವಾ ಸಂಖ್ಯೆಃ 216ಃ2005 ರಲ್ಲಿ ನಾನು ವಾದಿ ವಿರುದ್ಧ ಮಧ್ಯಂತರ ತಡೆಯಾಜ್ಞೆಯನ್ನು ನಾನು ಪಡೆದಿದ್ದ ಎಂದರೆ ಸರಿ . ಸದರಿ ಮಧ್ಯಂತರ ಆದೇಶ ಮಾಡಿದ ವ್ಯಾಪ್ತಿಯನ್ನು ಹೊರತುಪಡಿಸಿ ಉಳಿದ ಭಾಗಕ್ಕೆ ವಾದಿ ವ್ಯವಹಾರಕ್ಕೆ ತೊಂದರೆಯನ್ನು ಕೊಡಬಾರದೆಂದು ಈ

ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿ .
1ನೇ ಪ್ರತಿವಾದಿ ಮಂಜುಳಾ ಯಳಂದೂರಿಗೆ ಅಕ್ರಮವಾಗಿ ಕೇಬಲ್ ಸಂಪರ್ಕವನ್ನು ಕೊಟ್ಟಿರುತ್ತಾರೆಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿದ್ದರಿಂದ ಸಮಯ ನೀಡಲಾಯಿತು.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ
ಓ ಹೇ ಕೇ ಸ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ನ್ಯಾ ದಂ
ಕೊಳ್ಳೇಗಾಲ.